ಸಾಕ್ಷಿಯನ್ನು ದಿಃ **27.08.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ.ಜಿ.ಎಂ. ವಕೀಲರಿಂದಃ-

ನಾನು ನನ್ನ ತಾಯಿಯ ಬಳಿ ಆಸ್ತಿ ವಿಭಾಗ ಮಾಡಿಕೊಡುವಂತೆ ಕೇಳಿಲ್ಲ. ನನ್ನ ವಾದಪತ್ರದ ಖಂಡಿಕೆ 6 ರಲ್ಲಿ ನಾನು ನನ್ನ ತಾಯಿಯ ಬಳಿ ಆಸ್ತಿ ವಿಭಾಗ ಮಾಡಿಕೊಡುವಂತೆ ಕೇಳಿದ್ದೇನೆ ಎಂದರೆ ನನಗೆ ನೆನಪಿಲ್ಲ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಾದಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯಲ್ಲಿ ನಾನು ನನಗೆ ಹಾಗೂ 2 ಮತ್ತು 3 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಸಮಪಾಲುಕೊಡುವಂತೆ ಕೇಳಿದ್ದೇನೆ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೆ ಹಕ್ಕಿಲ್ಲ ಎಂದು ವಾದಪತ್ರದಲ್ಲಿ ನಾನು ಹೇಳಿಲ್ಲ. ನನಗೆ ಹಿಸ್ಸೆ ಕೊಡುವಂತೆ ಕೇಳಿದ್ದೇನೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ದಾವೆ ಹಾಕುವ ಕಾಲಕ್ಕೆ ನನ್ನ ತಾಯಿಯಾದ 1 ನೇ ಪ್ರತಿವಾದಿಗೂ ಹಕ್ಕಿತ್ತು ಎಂದರೆ ಇರಬಹುದು. ಈ ದಾವೆ ಹಾಕುವ ಕಾಲಕ್ಕೆ ನನ್ನ ತಾಯಿ ಬದುಕಿದ್ದರು. ನನ್ನ ತಾಯಿಯ ಜೀವಿತ ಕಾಲದಲ್ಲಿ 2015 ರಲ್ಲಿಯೇ ಆದ ಪಂಚಾಯಿತಿ ಪಾಲು ಪಾರಿಕತ್ತಿನಂತೆ ಹಿಸ್ಸೆ ಮಾಡಿಕೊಳ್ಳುವಂತೆ ನನ್ನ ತಾಯಿ ನನ್ನ ಬಳಿ ಆಗಾಗ್ಗೆ ಕೇಳುತ್ತಿದ್ದರು ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ಈ ದಾವೆಯಲ್ಲಿ ನನ್ನ ಸ್ವಂತ ಆಸ್ತಿಯಲ್ಲಿಯೂ ಕೂಡ ಪಾಲು ಬೇಕೆಂದು ಕೇಳಿದ್ದಾರೆ. 2 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ನನ್ನ ತಾಯಿಯಾದ 1 ನೇ ಪ್ರತಿವಾದಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಹಿರಿಯ ನಾಗರೀಕರ ಸಂರಕ್ಷಣ ಕಾಯ್ದೆ ಯಡಿಯಲ್ಲಿ ಅರ್ಜಿ ಹಾಕುವ ವಿಷಯವನ್ನು ಹೇಳಿದ್ದಾರೆ ಎಂದರೆ ಇರಬಹುದು. 2 ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ನಾನು ಈ ದಾವೆಯಲ್ಲಿ ಎಲ್ಲಾ ಪಿತ್ರಾರ್ಜಿತ ಆಸ್ತಿಯನ್ನು ಸೇರಿಸಿಲ್ಲ ಹಾಗೂ ತನಗೆ ಎಲ್ಲಾ ಪಿತ್ರಾರ್ಜಿತ ಆಸ್ತಿಗಳಲ್ಲಿ 3 ನೇ 1 ಭಾಗದ ಹಿಸ್ಸೆ ಬೇಕೆಂದು Counter Claim ಕೇಳಿದ್ದಾರೆ ಎಂದರೆ ಸರಿ. ದಿನಾಂಕ 24.06.2020 ರಂದು ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ಮಾಡಿಕೊಂಡ ನೋಂದಾಯಿತ ವಿಭಾಗ ಪತ್ರದಲ್ಲಿ 2015 ರಲ್ಲಿ ಆದ ಪಂಚಾಯಿತಿ ಪಾಲು ಪಾರಿಕತ್ತಿನಲ್ಲಿ ಕಾಣಿಸಿದ ಆಸ್ತಿಗಳನ್ನು ಮಾತ್ರ ಭಾಗ ಮಾಡಿಕೊಂಡು ಉಳಿದ ಆಸ್ತಿಗಳು ಈಗಲೂ ಕೂಡ ಮೃತ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿಯಲ್ಲ. ಈಗ ಖಾತೆಗಳು ಮೃತ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿ ವಿಭಾಗ ಪತ್ರ ಮಾಡಿಕೊಂಡಿರುವ ಆಸ್ತಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ.

2 ನೇ ಪ್ರತಿವಾದಿ ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಸುಮಾರು 9 ತಿಂಗಳು ಕಾಲಾವಕಾಶ ನೀಡಿದರೂ ಸಹ ನಾನು ಈ ದಾವೆಯಲ್ಲಿ ಸೇರಿಸದೆ ಬಿಟ್ಟಂತಹ ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳನ್ನು ಸೇರಿಸಿ 2 ನೇ ಪ್ರತಿವಾದಿಯು ಅಸಲು ದಾವೆ ಸಂಖ್ಯೆ 83/2021 ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 83/2021 ರಲ್ಲಿ ನಾನು ಏನು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಸದರಿ ದಾವೆಯ ನನ್ನ ಪ್ರತಿವಾದ ಪತ್ರದಲ್ಲಿ ನನ್ನ ತಂದೆ-ತಾಯಿಗೆ 3 ಜನ ಮಕ್ಕಳಿದ್ದರೂ ಸಹ ಸುಳ್ಳು ವಂಶವೃಕ್ಷವನ್ನು ಸೃಷ್ಠಿಸಿ ನಮೆಗೆ ಗೊತ್ತಿಲ್ಲದಂತೆ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿ ಸುಳ್ಳು ವಿಭಾಗದ ಪತ್ರವನ್ನು ನೋಂದಾಯಿಸಿಕೊಂಡಿದ್ದಾರೆಂದು ಹೇಳಿದ್ದೇನೆ. ಬೇರೆ ಏನು ಹೇಳಿದ್ದೇನೆಂದು ಈಗ ನೆನಪಿಲ್ಲ. ಅಸಲು ದಾವೆ ಸಂಖ್ಯೆ 83/2021 ರಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ.

ಈಗ ನನಗೆ 62 ವರ್ಷ ವಯಸ್ಸು. ನಾನು 1963 ರಲ್ಲಿ ಜನಿಸಿದ್ದು, ನನ್ನ ದಾಖಲೆಗಳಲ್ಲಿ 1962 ರಲ್ಲಿ ಜನಿಸಿದ್ದೇನೆಂದು ನಮೂದಾಗಿದೆ. 1976 ನೇ ಇಸವಿಯಲ್ಲಿ ನನಗೆ 13 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ 13 ನೇ ವಯಸ್ಸಿನಲ್ಲಿ ನನಗೆ ಸಾಗುವಳಿ ಪತ್ರ ನೀಡಿದ್ದಾರೆಂದು ಅಸಲು ದಾವೆ ಸಂಖ್ಯೆ 83/2021 ರ ಪ್ರತಿವಾದ ಪತ್ರದಲ್ಲಿ ನಾನು ಹೇಳಿದ್ದೇನೆ ಎಂದರೆ ಸರಿ. ಒಟ್ಟು ಕುಟುಂಬಕ್ಕೆ ಆದ ಮಂಜೂರಿಯನ್ನು ಮರೆ ಮಾಚಿ ನನ್ನ ಸ್ವಂತಕ್ಕೆ ಮಂಜೂರಾಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರಲ್ಲಿಯಾದ ಪಂಚಾಯಿತಿ ಪಾಲು ಪಾರಿಕತ್ತಿನ ಪ್ರಕಾರ ಬಿ ಆರ್ ಕಾವಲು ಗ್ರಾಮದ ಸರ್ವೆ ನಂ. 36 ರಲ್ಲಿ 4 ಎಕರೆ 3 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ಸರ್ವೆ ನಂ. 35 ರಲ್ಲಿಯೂ ಕೂಡ 4 ಎಕರೆ 3 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂ 36 ರಲ್ಲಿ 4 ಎಕರೆ ನನ್ನ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ಬಿ ಆರ್ ಕಾವಲು ಗ್ರಾಮದ ಸರ್ವೆ ನಂ. 53 ರಲ್ಲಿ 3 ಎಕರೆ 10 ಗುಂಟೆ 2015 ರ ಪಂಚಾಯಿತಿ ಪಾಲು ಪಾರಿಕತ್ತಿನ ಪ್ರಕಾರ 2 ನೇ ಪ್ರತಿವಾದಿ ಸುರೇಶ ರವರ ಸ್ವಾಧೀನದಲ್ಲಿದ್ದು, ನಂತರ 24.06.2020 ರ ನೋಂದಾಯಿತ ವಿಭಾಗ ಪತ್ರದ ಪ್ರಕಾರ ಸದರಿ ಜಮೀನು 2 ನೇ ಪ್ರತಿವಾದಿಯ ಸ್ವಾಧೀನಕ್ಕೆ ಹೋಯಿತು ಎಂದರೆ ನನಗೆ ಗೊತ್ತಿರದಂತೆ ಮಾಡಿಕೊಂಡಿದ್ದಾರೆ.

ಅಸಲು ದಾವೆ ಸಂಖ್ಯೆ 83/2021 ರಲ್ಲಿ ನನ್ನ ಸಹೋದರ ಸುರೇಶ ರವರ ಪರವಾಗಿ ಇದೇ ನ್ಯಾಯಾಲಯ ತಡೆಯಾಜ್ಞೆ ನೀಡಿತ್ತು ಎಂದರೆ ಸರಿ. ಸದರಿ ದಾವೆಯ ಐಟಂ ನಂ 2 ರ ಬಗ್ಗೆ ನ್ಯಾಯಾಲಯವು ಪರಭಾರೆ ಮಾಡದಂತೆ ಯಾವುದೇ ಋಣ ಭಾರ ಹೊರೆಸದಂತೆ ತಡೆಯಾಜ್ಞೆ ನೀಡಿತ್ತು ಎಂದರೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 83/2021 ರಲ್ಲಿ ಇರುವ ಐಟಂ ನಂ 2 ನನ್ನ ಮಗನಾದ ಸುಮೇಶ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅಸಲು

ದಾವೆ ಸಂಖ್ಯೆ 83/2021 ರಲ್ಲಿ ನನ್ನ ಮಗ ಸುಮೇಶ 3 ನೇ ಪ್ರತಿವಾದಿ ಎಂದರೆ ಸರಿ. ಅಸಲು ದಾವೆ ಸಂಖ್ಯೆ 83/2021 ರ 2 ನೇ ಐಟಂ ಯಾವಾಗ ಭೂ ಪರಿವರ್ತನೆ ಆಯಿತು ಎಂದು ನೆನಪಿಲ್ಲ. ಸದರಿ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇದ್ದಾಗ ಭೂ ಪರಿವರ್ತನೆ ಆಯಿತೇ ಅಥವಾ ನನ್ನ ಮಗನ ಹೆಸರಿಗೆ ಬಂದ ನಂತರ ಭೂ ಪರಿವರ್ತನೆ ಆಯಿತೇ ಎಂದು ಗೊತ್ತಿಲ್ಲ.

ನನ್ನ ಮಗನ ಹೆಸರಿನಲ್ಲಿ ಅನ್ಯಕ್ರಾಂತವಾಗಿರುವ ಜಮೀನಿನಲ್ಲಿರುವ ಮನೆಯಲ್ಲಿ ನಾನು ವಾಸ ಇದ್ದೇನೆ. ನನ್ನ ಮಗನ ಹೆಸರಿನಲ್ಲಿ ಅನ್ಯಕ್ರಾಂತವಾಗಿರುವ ಜಮೀನಿನಲ್ಲಿ ಒಂದು ರೈಸ್ ಮಿಲ್, ಒಂದು ಮನೆ ಮತ್ತು ಮಧ್ಯದ ಅಂಗಡಿ ತೆರೆಯಲು ಒಂದು ಕಟ್ಟಡ ಇದೆ ಎಂದರೆ ಸರಿ ಪಂಚಾಯಿತಿ ಇಂದ ಮಧ್ಯದ ಅಂಗಡಿಯ ಲೈಸೆನ್ಸ್ ಕೂಡ ಇದೆ ಎಂದರೆ ನನ್ನ ಮಗ ಪಡೆದುಕೊಂಡಿದ್ದಾನೆ. ಈ ಹಿಂದೆಯೂ ಕೂಡ ಅದೇ ಆಸ್ತಿಯಲ್ಲಿ ಎಂ ಕೆ ಪೋತರಾಜ್ ಎಂಬುವವರು ಬಾಡಿಗೆ ಆಧಾರದ ಮೇಲೆ ಮಧ್ಯದ ಅಂಗಡಿಯನ್ನು ನಡೆಸುತ್ತಿದ್ದರು ಎಂದರೆ ಸರಿ. ಕಳೆದ 4-5 ವರ್ಷಗಳಿಂದ ಸದರಿ ಮಧ್ಯದ ಅಂಗಡಿ ಮುಚ್ಚಿಹೋಗಿತ್ತು ಎಂದರೆ ಸರಿ. ಹಿಂದೆ ಇದ್ದ ಸಿ ಎಲ್ 7 ಲೈಸೆನ್ಸ ನ್ನು ಸಿ ಎಲ್ 9 ಕ್ಕೆ ಪರಿವರ್ತಿಸಿಕೊಂಡು ಸುಮಾರು 20 ಕೊಠಡಿಗಳುಳ್ಳ ಹಾಗೂ ಒಂದು ಹಾಲ್ ವುಳ್ಳ ಕಟ್ಟಡ ಇದೆ ಎಂದರೆ ನನ್ನ ಮಗ ಮಾಡಿದ್ದಾನೆ. ಸದರಿ ಜಾಗದಲ್ಲಿಯೇ ಒಂದು ತೂಗು ಸೇತುವೆ (weigh bridge) ಇದೆ ಎಂದರೆ ಸರಿ. ನನ್ನ ಮಗ ನಿರ್ಮಿಸಿದ್ದಾನೆ.

ನನ್ನ ತಮ್ಮ ಈಶ್ವರರವರು ಊರೊಳಗೆ ಇರುವ ನಮ್ಮ ಹಳೆಯ ಮನೆ ಇದ್ದ ಜಾಗದಲ್ಲಿ ಕಟ್ಟಿರುವ ವಾಣಿಜ್ಯ ಸಂಕೀರ್ಣದ ಮೇಲಿರುವ ವಾಸದ ಮನೆಯಲ್ಲಿ ವಾಸ ಇದ್ದಾರೆ. ನನ್ನ ತಮ್ಮ ಈಶ್ವರ ತನ್ನ ಇಬ್ಬರು ಗಂಡು ಮಕ್ಕಳೊಂದಿಗೆ ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಸಹೋದರ ಸುರೇಶರವರು ನನ್ನ ಹೊಟೇಲ್ ಹಿಂಭಾಗ ಕಲ್ಲು ಹಾಸಿದ ಮನೆಯಲ್ಲಿ ವಾಸ ಇದ್ದಾರೆ. ಸಾಕ್ಷಿ ಮುಂದುವರೆದು ನಾನು ಕೂಡ ತೋಟದೊಳಗೆ ಕಲ್ಲು ಹಾಸಿದ ಮನೆಯಲ್ಲಿ ವಾಸ ಇದ್ದೇನೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಮಗ ಅಸಲು ದಾವೆ ಸಂಖ್ಯೆ 83/2021 ರ ಅನ್ಯಕ್ರಾಂತವಾಗಿರುವ ಐಟಂ ನಂ 2 ರಲ್ಲಿ ವಾಸವಿದ್ದೇವೆ ಎಂದರೆ ಅಲ್ಲಿಯೇ ಬೇರೆ ವಾಸವಾಗಿದ್ದೇವೆ. ನಾನು ಮತ್ತು ನನ್ನ ಮಗ ವಿಭಾಗ ಆಗಿಲ್ಲ.

ಈ ನ್ಯಾಯಾಲಯ ನೀಡಿದ ತಡೆಯಾಜ್ಞೆಯನ್ನು ಪ್ರಶ್ನಿಸಿ ನನ್ನ ಮಗ ಸುಮೇಶ ಹುಣಸೂರು ಮಾನ್ಯ 8 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ. 11/2022 ನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ದಿನಾಂಕ 20.02.2023 ರಂದು ವಜಾಗೊಂಡಿದೆ ಎಂದರೆ ಗೊತ್ತಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನನ್ನ ಮಗ WP ಸಂಖ್ಯೆ 12277/2023 ನ್ನು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ

ಉಚ್ಚ ನ್ಯಾಯಾಲಯವು ಐಟಂ ನಂ 2 ರ ಬಗ್ಗೆ ಯಾವುದೇ ಕರಾರುಗಳನ್ನು ಮಾಡಿಕೊಂಡಲ್ಲಿ ಈ ನ್ಯಾಯಾಲಯದ ಮುಂದೆ ಹಾಜರುಪಡಿಸುವುದು ಹಾಗೂ ಅದರಿಂದ ಬರುವ ಬಾಡಿಗೆಯ ಬಗ್ಗೆ 3 ನೇ 1 ಭಾಗವನ್ನು ಈ ನ್ಯಾಯಾಲಯದ ಮುಂದೆ ಜಮಾ ಮಾಡಬೇಕೆಂದು ಆದೇಶ ಮಾಡಿದೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.